**ಮೂ.ದಾ.ನಂ.146/2018**

ಪಿ.ಡಬ್ಲ್ಯು.1

(ಇಂದು ದಿನಾಂಕ: **24-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. P.N.H. ವಕೀಲರಿಂದಃ**

ನನ್ನ ತಂದೆಯ ಹೆಸರು ನಾಗು ಗೌಡರಾಗಿದ್ದು, ನಾವು 3 ಜನ ಮಕ್ಕಳು ಇರುತ್ತೇವೆ. ನಮ್ಮ ತಂದೆಗೆ ಯಾವುದೇ ಹೆಣ್ಣು ಮಕ್ಕಳು ಇರುವುದಿಲ್ಲ. ನನ್ನ ತಂದೆಯು 40 ವರ್ಷದ ಹಿಂದೆ ಮೃತರಾಗಿರುತ್ತಾರೆ. ನನ್ನ ತಂದೆ 1981 ರಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆಯು ತೀರಿ ಹೋದ ನಂತರ ನಮ್ಮ ಗಂಡು ಮಕ್ಕಳ ಹೆಸರು ವಾರಿತಾ ನಾತೆಯಿಂದ ದಾಖಲಾಗಿತ್ತು ಎಂದರೆ ಸರಿ. ಜಟ್ಟು ನಾಗೂ ಗೌಡಾ ನನ್ನ ಅಣ್ಣನಾಗಿರುತ್ತಾನೆ. ಜಟ್ಟು ನಾಗು ಗೌಡಾ ಹಾಗೂ ತುಳಸು ನಾಗು ಗೌಡಾ ಇವರು ನನ್ನ ಸಹೋದರರಾಗಿರುತ್ತಾರೆ. ನನ್ನ ತಂದೆಗೆ ಮಾಸ್ತಿ ಕೋಂ ತುಳಸು ಗೌಡಾ ಎಂಬ ಮಗಳು ಇದ್ದಳು ಎಂದರೆ ಸರಿಯಲ್ಲ. ಮಾಸ್ತಿ ಕೋಂ ತುಳಸು ಗೌಡಾ ಇವರು ವಾರಿಸಾ ಆಗುವ ಸಂದರ್ಭದಲ್ಲಿ ತನಗೆ ಯಾವುದೇ ಪಾಲು ಬೇಡ ಎಂದು ಬರೆದುಕೊಟ್ಟಿದ್ದಳು ಎಂದರೆ ಸಾಕ್ಷಿಯು ಆಕೆಯು ನನ್ನ ಸಹೋದರಿಯಾಗಿದ್ದು, ಆಕೆಯು ಬರೆದುಕೊಟ್ಟಿರುತ್ತಾಳೆ ಎಂದು ನುಡಿಯುತ್ತಾರೆ.

ನನ್ನ ತಂದೆಗೆ ಒಟ್ಟೂ 5 ಆಸ್ತಿಗಳು ಇದ್ದು, ಸದ್ರಿ ಆಸ್ತಿಗಳು ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸರಿ. 1984 ರಲ್ಲಿ ತೋಂಡಿ ವಾಂಟಣಿಯಂತೆ ನನ್ನ ಅಂಶವಾರಿ ಜಾಗವನ್ನು ನನಗೆ ವಿಂಗಡಣೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 98 ಹಿಸ್ಸಾ 2 ರಲ್ಲಿ ನನಗೆ 20 ಗುಂಟೆ ಜಾಗವನ್ನು ನೀಡಿದ್ದಾರೆ ಎಂದರೆ ಸರಿ. ಸರ್ವೆ ನಂಬರ 91 ಹಿಸ್ಸಾ 6ಅ ದಲ್ಲಿ ನನಗೆ 3ಗುಂಟೆ ಕ್ಷೇತ್ರವನ್ನು ನೀಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 91 ಹಿಸ್ಸಾ 8ಬ 9 ಗುಂಟೆ 8 ಆಣೆ ಜಾಗವನ್ನು

**ಮೂ.ದಾ.ನಂ.146/2018**

ಪಿ.ಡಬ್ಲ್ಯು.1

ಜಟ್ಟು ನಾಗು ಗೌಡಾ ಹಾಗೂ ತುಳಸು ನಾಗು ಗೌಡಾ ಇವರು ಜಂಟಿಯಾಗಿ ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಸರ್ವೆ ನಂಬರ 91 ಹಿಸ್ಸಾ 10 ರ ಪೈಕಿ 12 ಗುಂಟೆ ಜಾಗವನ್ನು ಜಟ್ಟು ನಾಗು ಗೌಡಾ ಹಾಗೂ ತುಳಸು ನಾಗು ಗೌಡಾ ಇವರು ಜಂಟಿಯಾಗಿ ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಸರ್ವೆ ನಂಬರ 95 ಹಿಸ್ಸಾ 10 ರ ಪೈಕಿ 1 ಎಕರೆ 4 ಗುಂಟೆ 8 ಆಣೆ ಜಾಗವನ್ನು ಜಟ್ಟು ನಾಗು ಗೌಡಾ ಹಾಗೂ ತುಳಸು ನಾಗು ಗೌಡಾ ಇವರು ಜಂಟಿಯಾಗಿ ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಸರ್ವೆ ನಂಬರ 95 ಹಿಸ್ಸಾ 1 ರಲ್ಲಿ ಒಟ್ಟೂ ಕ್ಷೇತ್ರ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ.

ನಾನು ಈ ದಾವೆಯನ್ನು 20 ಗುಂಟೆ ಜಾಗವನ್ನು ನಮ್ಮ ಸಹೋದರರ ಸಾಮಾಯಿಕ ಹಕ್ಕಿನಲ್ಲಿ ದಾಖಲಿಸಿಕೊಂಡಿದ್ದು, ಈಗ ನಾನು ದೇವರ ಪೂಜೆಯನ್ನು ಈ ಆಸ್ತಿಯ ಜವಾಬ್ದಾರಿಯ ಮೇಲೆ ಮಾಡುತ್ತಿರುವುದರಿಂದ ನನ್ನ ಸಹೋದರರು ತಕರಾರು ಮಾಡಿದ್ದು ಆದ್ದರಿಂದ ಈ ದಾವೆಯನ್ನು ದಾಖಲಿಸಿರುತ್ತೇನೆ.

ಸರ್ವೆ ನಂಬರ 95 ಹಿಸ್ಸಾ 1 ರ ಪೈಕಿಯ ಜಾಗ 20 ಗುಂಟೆ ಯನ್ನು ಜಟ್ಟು ನಾಗು ಗೌಡಾ ಹಾಗೂ ತುಳಸು ನಾಗು ಗೌಡಾ ಹಾಗೂ ನನಗೆ ತೋಂಡಿ ವಾಂಟಣೆಯಲ್ಲಿ ಜಂಟಿಯಾಗಿ ಇಟ್ಟಿದ್ದಾರೆ ಎಂದರೆ ಸರಿ. ಸದ್ರಿ ಜಾಗವು ಮೂರು ಜನರ ವೈವಾಟಿಯಲ್ಲಿ ಇದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

ಪಿ.ಡಬ್ಲ್ಯು.1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ